# ಅನುಮಾನದ ಮೋಡಗಳ ಚದುರಿಸಿದ ಸೂರ್ಯ

ಸೂರ್ಯಕುಮಾರ್ ಯಾದವ್ ಕುದಿರಕ್ತದ ಹುಡುಗ. ಹಿಂದೆ ಕೋಪದಿಂದಾಗಿಯೇ ಟೀಕೆಗೆ ಗುರಿಯಾದವರು. ಈಗ ಅವರ ಆಟದಲ್ಲಿ ಮಾಗಿದ 'ಬ್ಯಾಟ್ಸ್‌ಮನ್‌ಷಿಪ್' ಕಾಣುತ್ತಿದೆ. ಗಾಯಗಳಿಂದ ಕಂಗಾಲಾಗದೆ ಪುಟಿದೆದ್ದ ಅವರ ಕ್ರಿಕೆಟ್‌ನ ಪುಟಗಳು ಆಸಕ್ತಿಕರವಾಗಿವೆ.

■ ವಿಶಾಖ ಎನ್.



ಮುಂಬೈನಲ್ಲಿ ಬ್ಯಾಟ್ಸ್‌ಮನ್‌ಷಿಪ್‌ನ ದೊಡ್ಡ ಪರಂಪರೆಯೇ ಇದೆ. ದೇಸಿ ಕ್ರಿಕೆಟ್‌ನ ಮಟ್ಟಿಗಂತೂ ಅದು ಹುರಿಯಾಳುಗಳ ನಡುವಿನ ಸ್ಪರ್ಧೆಯ ಆಡುಂಬೊಲ. ಮುಂಬೈನಲ್ಲಿ ಎಷ್ಟೇ ಗಮನಾರ್ಹ ಬ್ಯಾಟ್ಸ್‌ಮನ್ ಆದರೂ ಇನ್ಯಾವುದೋ ಹೊಸತನ್ನು ತೋರುವ ಮತ್ಯಾರೋ ಅಲ್ಲಿ ಬ್ಯಾಟ್ ತಿರುಗಿಸುತ್ತಾ ನಿಂತುಬಿಡುತ್ತಾರೆ. ರೋಹಿತ್ ಶರ್ಮ, ವಿರಾಟ್ ಕೊಹ್ಲಿ ತರಹದ ಮಾಗಿದ ಕ್ರಿಕೆಟಿಗರು ತಮ್ಮ ಅನುಭವದ ಸಾರ–ಸತ್ವವನ್ನು ಹಂಚುತ್ತಿರುವ ಚುಟುಕು ಕ್ರಿಕೆಟ್‌ನಲ್ಲಿ ಹೊಸತಾರೆಗಳು ಹೊಳೆಯುತ್ತಿರುವುದನ್ನು ಕಂಡೆವು. ಕೆಲವು ಮಿಂಚುಹುಳಗಳು ದೀರ್ಘಕಾಲದಿಂದ ಹಾರುತ್ತಿರುವುದು ಆಗೀಗ ಕಣ್ಣಿಗೆ ಬೀಳುತ್ತಿರುತ್ತದಷ್ಟೆ.

ಒಂದೂವರೆ ದಶಕದ ಹಿಂದೆ ಬಿಡುವು ಸಿಕ್ಕಾಗಲೆಲ್ಲ ಬ್ಯಾಟ್ ಹಿಡಿದು ಅಭ್ಯಾಸ ಮಾಡುತ್ತಿದ್ದ ದಿನೇಶ್ ಕಾರ್ತಿಕ್, ಈಗಲೂ ಅಂತಿಮ ಓವರ್‌ಗಳಲ್ಲಿ ಎಷ್ಟು ಸಮರ್ಥವಾಗಿ ಬ್ಯಾಟಿಂಗ್ ಮಾಡಬಲ್ಲರು ಎನ್ನುವುದನ್ನು ಬೆಂಗಳೂರು 'ರಾಯಲ್ ಚಾಲೆಂಜರ್ಸ್' ತಂಡದ ಪರ ಅವರು ಆಡುತ್ತಿರುವುದನ್ನು ನೋಡಿದರೆ ಗೊತ್ತಾಗುತ್ತದೆ. ಹಾರ್ದಿಕ್ ಪಾಂಡ್ಯ 'ಗುಜರಾತ್ ಟೈಟನ್ಸ್' ತಂಡದ ನಾಯಕನೂ ಆಗಿ ನೊಗ ಹೊತ್ತುಕೊಂಡು, ಎಲ್ಲರಿಗೂ 'ಬಕ್‌ಅಪ್' ಎನ್ನುತ್ತಾ ತಾವೂ ಹಳೆಯ ಲಯಕ್ಕೆ ಮರಳಿರುವುದನ್ನು ಕಂಡಾಗಲೂ ಕಣ್ಣರಳುತ್ತದೆ. ಆದರೆ, ಅವೆರಡಕ್ಕೂ ವಿಜಯಗಳ ಫಲಿತದ ಖುಷಿ ಇದೆ. 'ಮುಂಬೈ ಇಂಡಿಯನ್ಸ್' ತಂಡ ಸತತವಾಗಿ ಐದು ಪಂದ್ಯಗಳನ್ನು ಈ ಸಲದ ಬಾರಿಯ ಐಪಿಎಲ್‌ನಲ್ಲಿ ಸೋತಮೇಲೂ ಮೆಲುಕುಹಾಕಲು ಉಳಿದಿರುವುದು ಸೂರ್ಯಕುಮಾರ್ ಯಾದವ್ ಅವರ ಸ್ಥಿರ ಬ್ಯಾಟಿಂಗ್.

ಸೂರ್ಯಕುಮಾರ್ ಕೂಡ ಮುಂಬೈನ ಬ್ಯಾಟ್ಸ್‌ಮನ್‌ಷಿಪ್ ಪಾಠ ಕೇಳಿ ಬೆಳೆದವರ ನಡುವಿನಿಂದಲೇ ಬಂದವರು. 2010ರಲ್ಲಿ ಅವರು ರಣಜಿ ತಂಡಕ್ಕೆ ಆಯ್ಕೆಯಾದಾಗ ಪ್ರಶ್ನೆಗಳಿದ್ದವು. ದೆಹಲಿ ತಂಡದ ಎದುರು ಆ ಋತುವಿನಲ್ಲಿ ಮೊದಲ ಪಂದ್ಯ ಆಡಿದಾಗ ಅವರು ತೋರಿದ ಸಂಯಮ ಮರೆಯಲಾಗದು. ಅವುಡುಗಚ್ಚಿ ಅವರು ಮೊದಲ ಇನಿಂಗ್ಸ್‌ನಲ್ಲಿ ಆಡಿ, ಎಪ್ಪತ್ತಮೂರು ರನ್ ಕಲೆಹಾಕಿದರು. ತಂಡದ ಬೇರೆ ಯಾರೊಬ್ಬರೂ ಆ ಇನಿಂಗ್ಸ್‌ನಲ್ಲಿ ಅರ್ಧಶತಕ ಹೊಡೆಯಲು ಆಗಿರಲಿಲ್ಲ.

ಸೂರ್ಯಕುಮಾರ್ ಹೊಸತನದ ಆಟವನ್ನು ನೋಡಿಯೇ 'ಮುಂಬೈ ಇಂಡಿಯನ್ಸ್' ತಂಡ 2011ರಲ್ಲೇ ಅವರನ್ನು ಐಪಿಎಲ್‌ಗೆ ಎಳೆದುಕೊಂಡಿತು. ಆದರೆ, ಅವರ ಆ ಮೊದಲ ಋತುವಿನಲ್ಲಿ ಕೊಟ್ಟಿದ್ದು ಒಂದೇ ಪಂದ್ಯದಲ್ಲಿ ಆಡುವ ಅವಕಾಶವನ್ನು. ಆಮೇಲೆ ಮೂರು ವರ್ಷ ಅವರಲ್ಲಿ ಪಾಠಗಳನ್ನು ಕಲಿತರಾದರೂ ಬಲಿತ ಆಟಗಾರನಾಗಿ ಹೊಮ್ಮಲು ಆಗಲಿಲ್ಲ. ಪ್ರಭಾವಿಗಳ ನಡುವೆ ಅವರಂತಹ ಗ್ಲ್ಯಾಮರ್‌ರಹಿತ ಆಟಗಾರರು ಮಿಂಚುವುದು ಕಷ್ಟವಿತ್ತೆನ್ನಿ.

2014ರಲ್ಲಿ 'ಕೋಲ್ಕತ್ತ ನೈಟ್ ರೈಡರ್ಸ್' ಫ್ರಾಂಚೈಸಿಗಳು ಅವರು ಎಂತಹ ಮಿಂಚುಹುಳು

ಸೂರ್ಯಕುಮಾರ್ ಯಾದವ್ ಇಂಗ್ಲೆಂಡ್ ವಿರುದ್ಧ ಟ್ವೆಂಟಿ20 ಪಂದ್ಯ ಆಡಿದ್ದ ಸಂದರ್ಭ

